ರಾಜ್ಯದಲ್ಲಿ ಮಲೇರಿಯಾ ರೋಗಕ್ಕೆ ಬಲಿಯಾದವರು

1258 (1579) ಶ್ರೀ ರಾಮದಾಸ್ ಎ. (ಕೃಷ್ಣರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವರದಿಯಾಗಿರುವ ಮಲೇರಿಯಾ ರೋಗ ಪ್ರಕರಣಗಳೆಷ್ಟು; ಇದಕ್ಕೆ ಬಲಿಯಾದವರ ಸಂಖ್ಯೆ ಎಷ್ಟು?

ಆ) ಇದರ ನಿಯಂತ್ರಣಕ್ಕಾಗಿ ಕೈಗೊಳ್ಳಬೇಕಾದ ಕೀಟನಾಶಕದ ಸಿಂಪಡಣೆಯನ್ನು ಕೀಟನಾಶಕದ ಕೊರತೆಯಿಂದ ಕಳೆದ 3 ವರ್ಷಗಳಿಂದ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕೀಟನಾಶಕಗಳ ಕೊರತೆಗೆ ಕಾರಣವೇನು? ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಯಾವ ಯಾವ ಕೀಟನಾಶಕಗಳನ್ನು ಸರಬರಾಜು ಮಾಡಬೇಕಾಗಿದೆ; ಇವುಗಳ ಕೊರತೆಗೆ ಯಾರು ಜವಾಬ್ದಾರರು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವರದಿಯಾಗಿರುವ ಮಲೇರಿಯಾ ಪ್ರಕರಣಗಳು ಮತ್ತು ಈ ರೋಗದಿಂದ ಮರಣ ಹೊಂದಿರುವವರ ಸಂಖ್ಯೆ ಈ ಕೆಳಕಂಡಂತಿದೆ.

	ಮಲೇರಿಯಾ	ಮರಣ ಹೊಂದಿರುವ
ವರ್ಷ	ತಗಲಿರುವ ಪ್ರಕರಣಗಳು	ಪ್ರಕರಣಗಳು
1999	97.274	11
2000	1,09,118	14
2001	1,07,625	21
2002 (ಮೇ ವರೆಗೆ)	47,948	05

ಆ) ಕೀಟನಾಶಕ ಕೊರತೆಯಿದ್ದರೂ ಸಹ ಕೇಂದ್ರದಿಂದ ಸರಬರಾಜಾದ ಡಿ.ಡಿ.ಟಿ ಮತ್ತು ಮೇಲಾಥಿಯನ್ ಹಾಗೂ ರಾಜ್ಯವತಿಯಿಂದ ಖರೀದಿಸಿದ ಮೆಲಾಥಿಯಾನ್ ಮತ್ತು ಸಿಂಥಿಟಿಕ್ ಪೈರಿಥ್ರಾಯಿಡ್ ಕೀಟನಾಶಕಗಳನ್ನು ಆಯ್ದು ಸಮಸ್ಯಾತ್ಮಕ ಪ್ರದೇಶಗಳಲ್ಲಿ ಸಿಂಪಡಿಸಲಾಗಿದೆ.

ಇ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಆಯವ್ಯಯದ ಕೊರತೆಯೇ ಕೀಟನಾಶಕಗಳ ಕೊರತೆಗೆ ಕಾರಣವಾಗಿರುತ್ತದೆ. ಆದರೂ ಸಹ 2000-01 ನೇ ಸಾಲಿನಲ್ಲಿ 70 ಮೆಟ್ರಿಕ್ ಟನ್‌ಗಳ ಡಿ.ಡಿ.ಟಿ. ಕೀಟನಾಶಕವೇ ಅಲ್ಲದೇ, 100 ಮೆಟ್ರಿಕ್ ಟನ್ ಮೆಲಾಥಿಯಾನ್ ಕೀಟನಾಶಕ ಪುಡಿಯನ್ನು ಕೇಂದ್ರ ಸರ್ಕಾರವು ರಾಜ್ಯದ ಒತ್ತಾಯದ ಮೇರೆಗೆ ಸರಬರಾಜು ಮಾಡಿರುತ್ತದೆ.

2001-02ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಒದಗಿಸಿದ 150 ಮೆಟ್ರಿಕ್ ಟನ್ ಡಿ.ಡಿ.ಟಿ. ಹಾಗೂ ರಾಜ್ಯದ ಆಯವ್ಯಯಕ್ಕೆ ಅನುಗುಣವಾಗಿ ಖರೀದಿಸಿದ 64 ಮೆಟ್ರಿಕ್ ಟನ್ ಮೆಲಾಥಿಯನ್ ಮತ್ತು 6 ಮೆಟ್ರಿಕ್ ಟನ್‌ಗಳ ಸಿಂಥಿಟಿಕ್ ಪೈರಿಥ್ರಾಯಿಡ್ ಕೀಟನಾಶಕಗಳನ್ನು ಸಮಸ್ಯಾತ್ಮಕ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ಈ ಕೆಳಕಂಡಂತೆ ಸಿಂಪಡಿಸಲಾಗಿದೆ.

ವರ್ಷ	ಕೀಟನಾಶಕ ಹೆಸರು	ಸಿಂಪಡಿಸಿದ ಪ್ರಾ.ಆ ಕೇಂದ್ರಗಳ ಸಂ	ಸಿಂಪಡಿಸಿದ ಒಳಪಟ್ಟ ಜನಸಂಖ್ಯೆ (ಲಕ್ಷಗಳಲ್ಲಿ)
1999	ಡಿಡಿಟಿ	231	17.92
	ಮೆಲಾಥಿಯಾನ್	29	2.65
	ಸಿಂಥಿಟಿಕ್ ಪೈರಿಥ್ರಾಯಿಡ್	40	5.90
		300	

1	2	3	4
2000	ಡಿಡಿಟಿ	555	23.98
	ಮೆಲಾಥಿಯನ್	56	34.91
	ಸಿಂಥಿಟಿಕ್ ಪೈರಿಥ್ರಾಯಿಡ್	66	3.03
		677	
2001	ಡಿಡಿಟಿ	294	14.25
	ಮೆಲಾಥಿಯನ್	125	8.25
	ಸಿಂಥಿಟಿಕ್ ಪೈರಿಥ್ರಾಯಿಡ್	38	2.81
		457	

2002-03ನೇ ಸಾಲಿನಲ್ಲಿ ಕೀಟನಾಶಕ ಸರಬರಾಜು ನಿರೀಕ್ಷಿಸಲಾಗಿದೆ.

ಡೆಂಗಿ ಜ್ವರ ನಿಯಂತ್ರಣಕ್ಕೆ ಅನುದಾನ

1259 (1581) ಶ್ರೀ ರಾಮದಾಸ್ ಎ (ಕೃಷ್ಣರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ವರದಿಯಾಗಿರುವ ಮತ್ತು ಮರಣಿಸಿರುವ ಡೆಂಗಿ ಜ್ವರ ಪ್ರಕರಣಗಳು ಎಷ್ಟು;

ಆ) ಈ ಜ್ವರದ ನಿಯಂತ್ರಣಕ್ಕೆ ಸರ್ಕಾರ ಕಳೆದ 3 ವರ್ಷಗಳಿಂದ ವೆಚ್ಚ ಮಾಡಿರುವ ಹಣ ಎಷ್ಟು;

ಇ) 2001-02ನೇ ಸಾಲಿನಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿದ್ದರೂ ಯಾವುದೇ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸರ್ಕಾರದ ಆದೇಶದಂತೆ ಸರಬರಾಜಾದ ಸರಕುಗಳ ಬಿಲ್ಲುಗಳು ಪಾವತಿಯಾಗದೆ ಉಳಿದಿದ್ದರೂ ಸಹ ಸರ್ಕಾರವು ಒದಗಿಸಿದ್ದ ಆಯವ್ಯಯವನ್ನು ಒಂದಿಷ್ಟೂ ವೆಚ್ಚ ಮಾಡದೆ ಇಲಾಖೆಯು ಹಿಂತಿರುಗಿಸಿರುವುದು ನಿಜವೇ; ಎಷ್ಟು ಹಣ ಹಿಂದಿರುಗಿಸಲಾಗಿದೆ;

ಉ) ಇದರಿಂದಾಗಿ 2002-03ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಯಾವುದೇ ಅನುದಾನವನ್ನು ಒದಗಿಸದೇ ಇರುವುದು ನಿಜವೇ; ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ;

ಊ) ಈ ಬೇಜವಾಬ್ದಾರಿತನಕ್ಕೆ ಇಲಾಖೆಯ ಅಧಿಕಾರಿಗಳೇ ಹೊಣೆಗಾರರಾಗಿದ್ದು, ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವರದಿಯಾಗಿರುವ ಡೆಂಗಿ ಜ್ವರ ಪ್ರಕರಣಗಳು ಈ ಕೆಳಕಂಡಂತಿದೆ

ವರ್ಷ	ವರದಿಯಾಗಿರುವ ಪ್ರಕರಣಗಳು
1999	40
2000	196
2001	220
2002	41

(ಜುಲೈ 15 ರವರೆಗೆ)